**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**

**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**

**ಎಂ.ವಿ.ಸಿ.ಃ 8258/2024**

ಆರ್.ಡಬ್ಲೂ **2**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಎಂ. ಮನೋಹರ |
| **ತಂದೆಯ ಹೆಸರು** | ಃ | ವೆಂಕಟರಾಮುಲು |
| **ವಯಸ್ಸು** | ಃ | **53** ವರ್ಷ |
| **ಉದ್ಯೋಗ** | ಃ | ಹೆಚ್.ಸಿ, ಮುಲಕಲ್ ಚರೂರು |
| **ವಾಸ ಸ್ಥಳ** | ಃ | ಮುಲಕಲ್ ಚರೂರು |

**ದಿನಾಂಕಃ 06.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ .

ನಾನು ಸುಮಾರು 5 ವರ್ಷಗಳಿಂದ ಮೇಲೆ ತಿಳಿಸಿದ ಠಾಣೆಯಲ್ಲಿ ಹೆಚ್.ಸಿ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 07.10.2024ರಂದು ಕದರಿ ಮದನಪಲ್ಲಿ ರಸ್ತೆಯಲ್ಲಿ ಸಂಭವಿಸಿದ ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ದೂರನ್ನು ಸ್ವೀಕರಿಸಿ, ಪ್ರಥಮ ವರ್ತಮಾನ ವರದಿಯನ್ನು ನೊಂದಾಯಿಸಿ ಪ್ರಾಥಮಿಕ ತನಿಖೆಯನ್ನು ಕೈಗೊಂಡಿರುತ್ತೇನೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಶವ ತನಿಖಾ ವರದಿಯನ್ನು ತಯಾರಿಸಿ ಮೃತರ ಶವವನ್ನು ಮರಣೋತ್ತರ ಪರೀಕ್ಷೆ ಮಾಡಲು ಮನವಿ ಮೂಲಕ ಸಂಬಂಧಪಟ್ಟ ವೈದ್ಯರಿಗೆ ನೀಡಿರುತ್ತೇನೆ. ಆಪಾದಿತ ವಾಹನದ ಮಾಲೀಕರಿಗೆ ನಾನು

ಆರ್.ಡಬ್ಲೂ 2 ಎಂ. ಮನೋಹರ

ನೋಟೀಸು ನೀಡಿಲ್ಲ, ಆದರೆ ನನ್ನ ನಂತರದ ತನಿಖಾಧಿಕಾರಿ ನೀಡಿರುತ್ತಾರೆ. ಆ ಬಗ್ಗೆ ದಾಖಲಾತಿ ನಾನು ತಂದಿರುವ ಕಡತದಲ್ಲಿ ಲಭ್ಯವಿಲ್ಲ. ಅಂತಿಮ ವರದಿಯನ್ನು ನಮ್ಮ ಠಾಣೆಯ ಎಸ್.ಐ ರವರು ಸಲ್ಲಿಸಿರುತ್ತಾರೆ. ಅಂತಿಮ ವರದಿಯಲ್ಲಿ ಆಪಾದಿತ ವಾಹನಕ್ಕೆ ಪರ್ಮಿಟ್ ಇದೆ ಅಥವಾ ಇಲ್ಲ ಎಂಬ ಬಗ್ಗೆ ನಮೂದು ಇರುವ ಬಗ್ಗೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮುಂದಿನ ತನಿಖಾಧಿಕಾರಿ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**